## 2

# ಹಳೇ ಒಡಂಬಡಿಕೆಯಲ್ಲಿರುವ ವಾದ್ಯ ಸಂಗೀತ

ಹಳೇ ಒಡಂಬಡಿಕೆಯ ಆರಾಧನೆಯಲ್ಲಿ, ವಾದ್ಯ ಸಂಗೀತವನ್ನು ಉಪಯೋಗಿಸಿದ್ದರು, ಅದನ್ನು ಹೆಚ್ಚಾಗಿ ಕೀರ್ತನೆಗಳಲ್ಲಿ ನೋಡುತ್ತೇವೆ. ಇತರೆ ವಾಕ್ಯಗಳನ್ನು ಸಂಗೀತದ ಕುರಿತು ನೋಡುತ್ತೇವೆ. ಧರ್ಮಶಾಸ್ತ್ರದ ನಿಯಮಾವಳಿಯಂತೆ ಆರಾಧನೆಯನ್ನು ದೇವರು ಪರಿಗಣಿಸಿದ್ದನು ಎಂದು ನೋಡುವಾಗ, ಈಗಿನ ಕ್ರೈಸ್ತರಿಂದಲೂ ದೇವರು ಬಯಸಬಹುದಾದ ವಿಷಯಗಳನ್ನು ಗುರುತಿಸಬಹುದು.

### ಪಂಚಕಾಂಡಗಳು

ಪಂಚಶಾಸ್ತ್ರದಲ್ಲಿ, ಹಾಡುವ ಅಥವಾ ಸಂಗೀತದ ಕುರಿತು ಹೆಚ್ಚಾಗಿ ಹೇಳಿರುವದಿಲ್ಲ. ಯೂಬಾಲನು; ಇವನು ಕಿನ್ನರಿ ಕೊಳಲುಗಳನ್ನು ನುಡಿಸುವವರ ಮೂಲ ಪುರುಷನು (ಆದಿಕಾಂಡ 4:21). ಯಾಕೆ ನನ್ನನ್ನು ಮೋಸಗೊಳಿಸಿ ಕಳ್ಳತನದಿಂದ ಬಂದಿ? ನನಗೆ ತಿಳಿಸಿದ್ದರೆ ನಾನು ಸಂಗೀತಮಾಡಿಸಿ ಮದ್ದಳೆ, ವೀಣೆ ಮುಂತಾದ ವಾದ್ಯಗಳೊಡನೆ ಸಂತೋಷದಿಂದ ನಿನ್ನನ್ನು ಸಾಗಕಳುಹಿಸುತ್ತಿದ್ದೆನು (ಆದಿಕಾಂಡ 31:27).

ಅವರು ಕೆಂಪು ಸಮುದ್ರವನ್ನು ಯಶಸ್ವಿಯಾಗಿ ದಾಟಿದ ನಂತರ, ಮೋಶೆ ಮತ್ತು ಇಸ್ರಾಯೇಲ್ಯರು ಹಾಡನ್ನು ಹಾಡಿದರು (ವಿಮೋಚನಕಾಂಡ 15:1-18). ಅವರು "ಯೆಹೋವನಿಗೆ ಕೀರ್ತನೆಯನ್ನು ಹಾಡಿದರು" (15:1). ಮಿರ್ಯಾಮಳು ದಮ್ಮಡಿಯನ್ನು ಕೈಯಲ್ಲಿ ತೆಗೆದುಕೊಂಡಳು, ಸ್ತ್ರೀಯರೆಲ್ಲರೂ ದಮ್ಮಡಿಗಳನ್ನು ಹಿಡಿದು ನಾಟ್ಯವಾಡುತ್ತಾ ಆಕೆಯ ಹಿಂದೆ ಹೋದರು (ವಿಮೋಚನಕಾಂಡ 15:20, 21). ಅರಣ್ಯದಲ್ಲಿ ಹಾಡನ್ನು ಗಾನ ಮಾಡಿದರು, "ಬಾವಿಯೇ, ಉಕ್ಕುತ್ತಾ ಬಾ" ಎಂದು ಇಸ್ರಾಯೇಲ್ಯರು ಹಾಡಿದರು (ಅರಣ್ಯಕಾಂಡ 21:17, 18). ಇನ್ನೊಂದು ಹಾಡನ್ನು ಪದ್ಯವಾಗಿ ಹಾಡಬೇಕಿತ್ತು ಧರ್ಮೋಪದೇಶಕಾಂಡ 31:19-22. ಧರ್ಮಶಾಸ್ತ್ರದ ಅಂತ್ಯದಲ್ಲಿ, ಮೋಶೆಯು ರಚಿಸಿದ ಪದ್ಯ ಎಂದು ಹೇಳಲಾಯಿತು (32:1-43). ಇಲ್ಲಿ ವಾದ್ಯಗಳ ಕುರಿತು ತಿಳಿಸಿರುವದಿಲ್ಲ.

ದೇವದರ್ಶನ ಗುಡಾರದ ಆರಾಧನೆಯ ಕುರಿತು ಸಲಹೆಗಳನ್ನು ನೀಡುವಾಗ, ಯೆಹೋವನು ಮೋಶೆಗೆ ಆಜ್ಞಾಪಿಸಿದ್ದೇನೆಂದರೆ ನೀನು ಬೆಳ್ಳಿಯ ತಗಡಿನಿಂದ ಎರಡು ತುತೂರಿಗಳನ್ನು ಮಾಡಿಸಬೇಕು (ಅರಣ್ಯಕಾಂಡ 10:1, 2). ಆರೋನನ ವಂಶಸ್ಥರಾದ ಯಾಜಕರೇ ಆ ತುತೂರಿಗಳನ್ನು ಊದಬೇಕು. ಜನ ಸಮೂಹದವರನ್ನು ಕೂಡೀಕರಿಸುವದಕ್ಕೂ ದಂಡುಗಳನ್ನು ಹೊರಡಿಸುವದಕ್ಕೂ ಅವುಗಳನ್ನು ಉಪಯೋಗಿಸ ಬೇಕು (ಅರಣ್ಯಕಾಂಡ 10:8), ಅದನ್ನು ಊದುವಂತ ಸಮಯವನ್ನು ನಿಗದಿಪಡಿಸಲಾಗಿತ್ತು (ಯಾಜಕಕಾಂಡ 23:24; ಅರಣ್ಯಕಾಂಡ 10:10). ಕೊಂಬಿನ ಧ್ವನಿಯಿಂದ ಸಬ್ಬತ್ ಸಂವತ್ಸರವನ್ನು ಆಚರಿಸಬೇಕು (*shophar*; ಯಾಜಕಕಾಂಡ 25:9, 10). ದೇವ ದರ್ಶನದ ಗುಡಾರದ ಆರಾಧನೆಯಲ್ಲಿ ಬೇರೆ ಯಾವ ವಾದ್ಯವನ್ನು ದಾಖಲುಮಾಡಿರುವದಿಲ್ಲ.

ಮೆಸಪೊಟೋಮಿಯ ಹಾಗು ನೈಲ್ ಸಂಸ್ಕೃತಿಯಲ್ಲಿ, ವಾದ್ಯಗಳ ಸಂಗತಿಗಳು, ಇಸ್ರಾಯೇಲ್ಯರಿಗಿಂತ ಹಳೆಯ ವಿಷಯವಾಗಿತ್ತು. ಇತರರನ್ನು ಅನುಸರಿಸಬಾರದು ಎಂಬ ಆಜ್ಞೆಯು ಇಸ್ರಾಯೇಲ್ಯರ ಸಂಸ್ಕೃತಿಯ ಒಂದು ಭಾಗವಾಗಿತ್ತು (ಯಾಜಕಾಂಡ 18:3; ಧರ್ಮೋಪದೇಶಕಾಂಡ 12:30).

## ಇತಿಹಾಸದ ಪುಸ್ತಕಗಳು

ಇತಿಹಾಸದ ಪುಸ್ತಕಗಳಲ್ಲಿ, ಹಾಡುಗಳ ಕುರಿತು ಸಾಕಷ್ಟು ದಾಖಲೆಗಳಿವೆ. ಸಿಪ್ಪೈ ಪಟ್ಟಣವನ್ನು ಜಯಿಸಿದ ನಂತರ, ನ್ಯಾಯ ಸ್ಥಾಪಕರು 5ರಲ್ಲಿ, ದೆಬೋರ ಮತ್ತು ಬಾರಾಕರು ಸಂಗೀತವನ್ನು ಬರೆದರು. ಯೆಪ್ತಾನನು ಯುದ್ಧದಿಂದ ಹಿಂದಿರುಗಿದಾಗ, ಅವನ ಮಗಳು ದಮ್ಮಡಿ ಬಡೆಯುತ್ತಾ ನಾಟ್ಯವಾಡುತ್ತಾ ಅವನನ್ನು ಎದುರುಗೊಂಡಳು (ನ್ಯಾಯಸ್ಥಾಪಕ 11:34). ಅಭಿಷೇಕ ಹೊಂದಿದ ಸೌಲನು ದೇವಗಿರಿಯನ್ನು ಮುಟ್ಟಿದಾಗ ಮುಂಗಡೆಯಲ್ಲಿ ಸ್ವರಮಂಡಲ, ದಮ್ಮಡಿ, ಕೊಳಲು, ಕಿನ್ನರಿಗಳನ್ನೊಳಗೊಂಡ ಪ್ರವಾದಿಗಳು ಅವನನ್ನು ಎದುರುಗೊಂಡರು (1 ಸಮುವೇಲ 10:5, 10). ದಾವೀದನು ಫಿಲಿಷ್ಟಿಯನನ್ನು ಸಂಹರಿಸಿ ಸರ್ವಜನರೊಡನೆ ಹಿಂದಿರುಗಿ ಬರುವಾಗ ಇಸ್ರಾಯೇಲ್ಯರ ಎಲ್ಲಾ ಪಟ್ಟಣಗಳಿಂದ ಸ್ತ್ರೀಯರು ಹೊರಗೆ ಬಂದು ದಮ್ಮಡಿ ತಾಳಗಳನ್ನು ಹಿಡಿದು ಸಂತೋಷದಿಂದ ಹಾಡುತ್ತಾ ಕುಣಿಯುತ್ತಾ ಅರಸನಾದ ಸೌಲನನ್ನು ಎದುರುಗೊಂಡರು. ಅವರು ಪರಸ್ಪರವಾಗಿ, "ಸೌಲನು ಸಾವಿರಗಟ್ಟಳೆ ಯಾಗಿ ಕೊಂದನು, ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು ಎಂದು ಹಾಡಿದರು" (1 ಸಮುವೇಲ 18:6, 7).

ದಾವೀದನು ತಾನೇ ಸಂಗೀತಗಾರನಾಗಿದ್ದನು. ಅವನು ಹಾಡುವದಕ್ಕಾಗಿ ಆಯ್ಕೆಗೊಂಡಿದ್ದನು (*nagan*) ದುರಾತ್ಮವು ಸೌಲನ ಮೇಲೆ ಬರುವಾಗ, ದಾವೀದನು ಕಿನ್ನರಿಯನ್ನು ನುಡಿಸುತ್ತಿದ್ದನು (1 ಸಮುವೇಲ 16:14-23; 18:10; 19:9). ದಾವೀದನು ಬಿಲ್ಲೆಂಬ ಒಂದು ಶೋಕಗೀತೆಯನ್ನು ರಚಿಸಿ, ಅದನ್ನು ಯೆಹೂದ್ಯರಿಗೆ ಕಲಿಸಬೇಕೆಂದು ಆಜ್ಞಾಪಿಸಿದನು (2 ಸಮುವೇಲ 1:17, 18). ಅವನನ್ನು ಕರ್ತನು ವೈರಿಗಳಿಂದ ಬಿಡಿಸಿದ್ದಕ್ಕಾಗಿ ಸ್ತುತಿಗೀತೆಯನ್ನು ಹಾಡಿದನು (2 ಸಮುವೇಲ 22:1-51).

ನಂತರ, ದಾವೀದನೂ ಎಲ್ಲಾ ಇಸ್ರಾಯೇಲ್ಯರೂ ಕಿನ್ನರಿ, ಸ್ವರಮಂಡಲ, ದಮ್ಮಡಿ ಝುಲ್ಲರಿ, ತಾಳ ಇವುಗಳನ್ನು ಬಾರಿಸಿಕೊಂಡು ಪೂರ್ಣಾಸಕ್ತಿಯಿಂದ ಗೀತೆಗಳನ್ನು ಹಾಡುತ್ತಾ ಯೆಹೋವನ ಮುಂದೆ ನರ್ತನ ಮಾಡುತ್ತಾ ಹೋದರು (2 ಸಮುವೇಲ 6:5; 1 ಪೂರ್ವಕಾಲವೃತ್ತಾಂತ 13:7, 8). ದಾವೀದನು ನಾರಿನ ಎಫೋದನ್ನು ಧರಿಸಿಕೊಂಡವನಾಗಿ ಯೆಹೋವನ ಸನ್ನಿಧಿಯಲ್ಲಿ ಪೂರ್ಣಾಸಕ್ತಿಯಿಂದ ಕುಣಿದಾಡಿದನು ಹೀಗೆ ದಾವೀದನೂ ಎಲ್ಲಾ ಇಸ್ರಾಯೇಲ್ಯರೂ ಆರ್ಭಟಿಸುತ್ತಾ ತುತೂರಿ ಊದುತ್ತಾ ಯೆಹೋವನ ಮಂಜೂಷವನ್ನು ತಂದರು (2 ಸಮುವೇಲ 6:14, 15). ದಾವೀದನು ಯೆಹೋವನ ಆಲಯದಲ್ಲಿದ್ದ ವಾದ್ಯ ಸೇವೆಗೆ ನೇಮಿಸಿ, ಅವರು ಯೆರುಸಲೇಮಿನ ಆಲಯವನ್ನು ಕಟ್ಟುವ ತನಕ ದೇವದರ್ಶನ ಗುಡಾರ ವೆಂಬ ಆಲಯದ ಮುಂದೆ ತಮ್ಮ ಕ್ರಮಾನುಸಾರವಾಗಿ ವಾದ್ಯ ಸೇವೆಯನ್ನು ನಡಿಸುತ್ತಿದ್ದರು (1 ಪೂರ್ವಕಾಲವೃತ್ತಾಂತ 6:31, 32). ಸೊಲೋಮೋನನು 1,005 ಕೀರ್ತನೆಗಳನ್ನು ಬರೆದಿದ್ದನು. ಬಾಬಿಲೋನಿನಿಂದ ಹಿಂದಿರುಗಿದಾಗ, ಅವರು ದೇವರ ಆಲಯವನ್ನು ಮತ್ತು ಗೋಡೆಯನ್ನು ಕಟ್ಟಿ ಮುಗಿಸಿದ ನಂತರ, ಲೇವಿಯರು ಸ್ತುತಿಗೀತೆಯನ್ನು ಮತ್ತು ಕೃತಜ್ಞತಾಸ್ತುತಿಯನ್ನು ಸಲ್ಲಿಸಿದರು (ಎಜ್ರ 3:10; ನೆಹೆಮೀಯನು 12:45, 46).

1, 2ನೇ ಅರಸುಗಳ ಬರಹಗಾರರಿಗಿಂತ 1, 2 ಪೂರ್ವಕಾಲ ವೃತ್ತಾಂತದ ಬರಹಗಾರನು ದಾವೀದನ ವಾದ್ಯ ಕ್ರಮದ ಕುರಿತು ಹೆಚ್ಚು ಆಸಕ್ತಿಕರವಾದ ವಿವರಗಳನ್ನು ನೀಡಿರುವನು. ದೇವದರ್ಶನದ ಸಲಹೆಗಳನ್ನು ಮೋಶೆಯು ನೀಡಿರುವಾಗ, ಮತ್ತು ಬೆಳ್ಳಿಯ ತಗಡಿನ ತುತ್ತೂರಿಯ ಕುರಿತು ತಿಳಿಸಿರುವನು, ಇದರ ಹೊರತಾಗಿ ಆರಾಧನೆಯಲ್ಲಿ ವಾದ್ಯ ಸಂಗೀತದ ಕುರಿತು ತಿಳಿಸಿರುವದಿಲ್ಲ, ಆಮೇಲೆ ದಾವೀದನೂ ಆರಾಧಕ ಮಂಡಲಿಯವರ ಪ್ರಧಾನರೂ ಕಿನ್ನರಿ ಸ್ವರಮಂಡಲ ತಾಳ ಇವುಗಳನ್ನು ಬಾರಿಸುತ್ತಾ ಪರವಶರಾಗಿ ಗಾಯನ ಸೇವೆ ಮಾಡುವದಕ್ಕೋಸ್ಕರ ಅಸಾಫ್ಯರನ್ನೂ ಹೇಮಾನ್ಯರನ್ನೂ ಯೆದುತೂನ್ಯರನ್ನು ಆರಿಸಿದರು (1 ಪೂರ್ವಕಾಲವೃತ್ತಾಂತ 25:1-8). ಯೆದೂತ್ಯನ ಮಕ್ಕಳು ಕಿನ್ನರಿಯನ್ನು ಬಾರಿಸುತ್ತಾ

ಪರವಶರಾಗಿ ಯೆಹೋವನ ಕೀರ್ತನೆ ಮಾಡುತ್ತಿದ್ದರು (1 ಪೂರ್ವಕಾಲವೃತ್ತಾಂತ 25:3). ಸ್ತ್ರೀ ಪುರುಷ ಅವರಿಬ್ಬರೂ ತಾಳ, ಸ್ವರಮಂಡಲ, ಕಿನ್ನರಿ ಇವುಗಳಿಂದ ಗಾಯನ ಮಾಡುತ್ತಿದ್ದರು (1 ಪೂರ್ವಕಾಲವೃತ್ತಾಂತ 25:6) ಅವರು ತರಬೇತಿ ಪಡೆದು ನುರಿತವರಾಗಿದ್ದರು. ದೇವಾಲಯದ ಸಂಗೀತಗಾರರು ಇಪ್ಪತ್ತ ನಾಲ್ಕು ಗುಂಪುಗಳಾಗಿ ವಿಂಗಡವಾಗಿದ್ದರು. ಅವರು ಅದನ್ನು ಗುಂಪಾಗಿ ನುಡಿಸುತ್ತಿದ್ದರು, ಮತ್ತು ಅದು ಸಮೂಹ ಗಾಯನವಾಗುತ್ತಿತ್ತು. ದೇವಾಲಯವನ್ನು ಕಟ್ಟುವ ಮೊದಲೇ ಈ ಸಂಗತಿಗಳು ಕಾರ್ಯರೂಪದಲ್ಲಿತ್ತು. ಈ ಕ್ರಿಯೆಗೆ ದಾವೀದನು ಯಾವುದೇ ಅಧಿಕಾರವನ್ನು ಹೊಂದಿರಲಿಲ್ಲ. ನಂತರ 2 ಪೂರ್ವಕಾಲವೃತ್ತಾಂತ 29:25ರಲ್ಲಿ, "ಪ್ರವಾದಿಗಳ ಮೂಲಕ ದೇವರು ಈ ಆಜ್ಞೆಯನ್ನು ನೀಡಿದ್ದನು."

ಹದಿನೆಂಟನೇ ಶತಮಾನದ ಅಂತ್ಯದಲ್ಲಿ ಬಹಳವಾಗಿ ಉಪಯೋಗಿಸಲ್ಪಟ್ಟಿದ ಕಾಮೆಂಟರಿಯಿಂದ ಆಡಮ್ ಕ್ಲಾರ್ಕ್‌ರವರು 2 ಪೂರ್ವಕಾಲವೃತ್ತಾಂತ 29:25ನೇ ಭಾಗವು ಸಿರಿಯಾಕ್ ಮತ್ತು ಅರೇಬಿಯಾದ ತರ್ಜುಮೆಯು, ಇಬ್ರಿಯ ವಾಕ್ಯದಲ್ಲಿ ವ್ಯತ್ಯಾಸವಾಗಿದೆ. ಎಂದು ತಿಳಿಸಿರುವರು,

> ದೇವರ ಮತ್ತು ಆತನ ಪ್ರವಾದಿಗಳಿಂದ ಪಡೆದ ಆಜ್ಞೆಗನುಸಾರವಾಗಿ ಲೇವಿಯರು ದೇವರನ್ನು ಸ್ತುತಿಸಬೇಕಿತ್ತು. ದಾವೀದನ ಆಜ್ಞಾನುಸಾರ ಅನೇಕ ವಾದ್ಯಗಳು; ಆತ್ಮೀಕ ವಿಷಯಗಳಿಗೆ ಪರಿಚಯಿಸಲ್ಪಟ್ಟವು.

ನಂತರ ಕ್ಲಾರ್ಕ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ಒಂದು ವೇಳೆ ವಾದ್ಯಗಳ, "ಉಪಯೋಗವನ್ನು ನಿಯಮದಲ್ಲಿ ತಿಳಿಸಿದ್ದರೂ [ಉದಾಹರಣೆಯಾಗಿ] ... ಅದನ್ನು ಕ್ರೈಸ್ತ ಆರಾಧನೆಯಲ್ಲಿ ಉಲ್ಲೇಖಿಸಬೇಕೆ?"[1]

ಕ್ಲಾರ್ಕ್‌ರವರ ಹೇಳಿಕೆಯನ್ನು ಡೇವಿಡ್ ಲಿಪ್ ಸ್ಕಾಂಬ್ ಮತ್ತು N. ಉಡ್ಸ್‌ರವರು[2] ಪುನಃ ವ್ಯಾಖ್ಯಾನಿಸಿ, 1 ಅಥವಾ 2 ಪೂರ್ವಕಾಲವೃತ್ತಾಂತದ ಸಮಯದಲ್ಲಿ ಪ್ರವಾದಿಗಳು ಸುಳ್ಳು ಪ್ರವಾದಿಗಳಿದ್ದರೆಂಬ ಸಲಹೆಯನ್ನು ನೀಡಿರುತ್ತಾರೆ. ಹೊಸ ಒಡಂಬಡಿಕೆಯಲ್ಲಿ ದಾವೀದನು ಆತ್ಮನ ಮೂಲಕವಾಗಿ ಕೀರ್ತನೆಗಳನ್ನು ಬರೆದನೆಂದು ತಿಳಿದಿರುತ್ತಾರೆ (ಅಪೊಸ್ತಲರಕೃತ್ಯಗಳು 2:30). ಪೌಲನು ಸಹ ದಾವೀದನ ಕುರಿತಾಗಿ ಬರೆದಿರುವನು (ರೋಮಾಪುರ 4:6). ಇಬ್ರಿಯ ಗ್ರೀಕ್, ಮತ್ತು ಲ್ಯಾಟಿನ್ ಭಾಷೆಗಳಲ್ಲಿ ದಾವೀದನ *ದೈವೀಕ ಅಧಿಕಾರವನ್ನು* ತಿಳಿಸಿರುವರು.

ಸೊಲೋಮೋನನು ದೇವಾಲಯದ ಕಾರ್ಯವನ್ನು ಪೂರ್ಣಗೊಳಿಸಿದ ನಂತರ, ದೇವರ ಮಂಜೂಷವನ್ನು ಆಲಯಕ್ಕೆ ತರುವಾಗ ದೇವಾಲಯದ ಹಾಡುಗಾರರು ಯಜ್ಞ ವೇದಿಯ ಪೂರ್ವದಿಕ್ಕಿನಲ್ಲಿ ನಿಂತಿದ್ದರು. ಅಲ್ಲಿ 120 ಯಾಜಕರು ತುತೂರಿಗಳನ್ನು ಹಿಡಿದು ನಿಂತಿದ್ದರು. ಹಾಡುಗಾರರ ಕೈಯಲ್ಲಿ ತಾಳಗಳು, ವೀಣೆಗಳೂ ಹಾಗೂ ಕೊಳಲುಗಳಿದ್ದವು. ಅವರೆಲ್ಲರೂ ಒಟ್ಟಾಗಿ ದೇವರ ಸ್ತುತಿಯನ್ನು ಮತ್ತು ಕೃತಜ್ಞತೆಯನ್ನು ಒಟ್ಟಾದ ಸ್ವರದಿಂದ ಹಾಡುತ್ತಿದ್ದರು. ಅವರು ತಾಳಗಳಿಂದಲೂ, ತುತೂರಿಗಳಿಂದಲೂ ಮತ್ತು ಇತರೆ ವಾದ್ಯಗಳಿಂದಲೂ ಸ್ತುತಿಗೀತೆಯನ್ನು ಹಾಡುವಾಗ "ಕರ್ತನು ಒಳ್ಳೇಯವನು ಆತನ ಕೃಪೆಯ ಶಾಶ್ವತವಾದದ್ದು ಎಂದು ಹಾಡಿದರು" (2 ಪೂರ್ವಕಾಲವೃತ್ತಾಂತ 5:12, 13). "ಕೃತಜ್ಞತಾಸ್ತುತಿ ಮಾಡಿದೊಡನೆ ಮೇಘವು ಕರ್ತನ ಆಲಯದಲ್ಲಿ ತುಂಬಿಕೊಂಡಿತು" (2 ಪೂರ್ವಕಾಲವೃತ್ತಾಂತ 5:13, 14).

ಹೀಜ್ಕೀಯನ ಸುಧಾರಣೆಯ ಕಾಲದವರೆಗೂ, ಬರಹಗಾರನು ವಾದ್ಯ ಸಂಗೀತದ ಕುರಿತು ಪ್ರಸ್ತಾಪಿಸಿರುವದಿಲ್ಲ. ಇದಲ್ಲದೆ ಅವನು ತಾಳ ಸ್ವರಮಂಡಲ, ಕಿನ್ನರಿ ಇವುಗಳಿಂದ ಭಜಿಸುವದಕ್ಕೋಸ್ಕರ ಲೇವಿಯರನ್ನು ನೇಮಿಸಿದನು (2 ಪೂರ್ವಕಾಲವೃತ್ತಾಂತ 29:25). ಇದು ದೇವಾಲಯದ ಅಂಗಳದಲ್ಲಿದ್ದ ಚಟುವಟಿಕೆಯಾಗಿತ್ತು; ಯಾಜಕರು ಮಾತ್ರ ಆ ಆಲಯದ ಪ್ರವೇಶ ಮಾಡುವವರಾಗಿದ್ದರು. ಸರ್ವಾಂಗ ಹೋಮ ಸಮರ್ಪಣೆಯು ಪ್ರಾರಂಭಿಸಿದೊಡನೆ ಇಸ್ರಾಯೇಲ್ ರಾಜನಾದ ದಾವೀದನ ವಾದ್ಯಗಳಿಂದ ಕರ್ತನನ್ನು ಭಜಿಸುವುದು ತುತೂರಿ

ಊದುವುದು ಆರಂಭವಾಯಿತು (2 ಪೂರ್ವಕಾಲವೃತ್ತಾಂತ 29:27). ಸಮೂಹದವರೆಲ್ಲರು ಕರ್ತನನ್ನು ಆರಾಧಿಸಿದರು, ಆಯ್ಕೆಗೊಂಡ ಲೇವಿಯರು ಸಂತೋಷದಿಂದ ಸ್ತುತಿಸಿದರು, ನಂತರ ಜನ ಸಮೂಹವೆಲ್ಲ ಬೊಗ್ಗಿಕೊಂಡು ನಮಸ್ಕರಿಸಿದರು.

1 ಮತ್ತು 2 ಪೂರ್ವಕಾಲದ ಯೋಷೀಯನ ಸುಧಾರಣೆಯ ಸಮಯದಲ್ಲೂ ವಾದ್ಯದ ಕುರಿತಾಗಿ ಬರಹಗಾರನು ತಿಳಿದಿರುವದಿಲ್ಲ. ಹಾಗೂ ಯೋಷೀಯನು ಸತ್ತ ನಂತರ, ಯೆರೆಮೀಯನು ಅವನನ್ನು ಕುರಿತು ಪ್ರಲಾಪಿಸಿದನು. ಎಲ್ಲಾ ಯೆರುಸಲೇಮಿನವರು "ಈ ದಿನದಲ್ಲಿ" ಯೋಷೀಯನ ವಿಷಯವಾಗಿ ಗೋಳಾಡಿದರು (2 ಪೂರ್ವಕಾಲವೃತ್ತಾಂತ 35:25).

## ಪ್ರವಾದಿಗಳು

ಯೆಶಾಯನು ಸಹ ಹಾಡುವದರ ಕುರಿತು ಇಪ್ಪತ್ತ - ಮೂರು ಅಂಶಗಳನ್ನು ನೀಡಿರುವನು: ಹದಿನೈದು ಹಾಡುಗಳು ಮನುಷ್ಯರದ್ದು,[3] ಮತ್ತು ಭೂಮಂಡಲದ ಕಡೆಯಿಂದ ಏಳು ಗೀತೆಗಳನ್ನು ಹಾಡಿರುವ ಸಂಕೇತಗಳಿವೆ, ಅದರಲ್ಲಿ ಬೆಟ್ಟಗಳ ಹಾಗೂ ಪರಲೋಕಕ್ಕೆ ಸಂಬಂಧಪಟ್ಟ[4] ಹಾಡುಗಳು ಅಡಕವಾಗಿವೆ. ಸಂತೋಷಕ್ಕಾಗಿ ಹಾಡುವುದೇ ಮುಖ್ಯ ಆದ್ಯತೆಯಾಗಿರುತ್ತದೆ, ಆದರಲ್ಲಿ ವಾದ್ಯಗಳನ್ನು ಹೊರತು ಪಡಿಸಲಾಗಿರುತ್ತದೆ. ಎರಡು ವಾದ್ಯಗಳ ಕುರಿತಾಗಿ ಮಾತ್ರ ನೇರವಾಗಿ ತಿಳಿಸಲಾಗಿದೆ. ಒಂದರಲ್ಲಿ, ಯೆಶಾಯನು ಅದನ್ನು "ಸೂಳೆಯ ರಾಗ" ಎಂದು ಕರೆದಿರುವನು ಅದೇನೆಂದರೆ ಎಲ್ಲರು ಮರೆತ ಸೂಳೆಯೇ, ಕಿನ್ನರಿಯನ್ನು ತೆಗೆದುಕೊಂಡು ಊರಲ್ಲಿ ಅಲೆಯುತ್ತಾ ಜನರು ನಿನ್ನನ್ನು ಜ್ಞಾಪಿಸಿಕೊಳ್ಳುವಂತೆ ಚೆನ್ನಾಗಿ ನುಡಿಸಿ ಬಹುಗೀತೆಗಳನ್ನು ಹಾಡು ಎಂಬುವದೆ (ಯೆಶಾಯ 23:15, 16). ಎರಡನೆಯದಾಗಿ, ಹಬ್ಬದ ಸೌರಣೆಯ ರಾತ್ರಿಯಲ್ಲೋ ಎಂಬಂತೆ ಹಾಡುವಿರಿ; ಅವನು ಕರ್ತನ ಪರ್ವತಕ್ಕೆ ಹೃದಯಾನಂದದಿಂದ ಹೋಗುವಂತಿರುತ್ತದೆ (ಯೆಶಾಯ 30:29). ಇನ್ನೊಂದು ನೇರವಾದ ಹೇಳಿಕೆ, "ಕರ್ತನು ನನಗೆ ರಕ್ಷಣಾಪರನಾಗಿದ್ದಾನಷ್ಟೆ ನಮ್ಮ ಜೀವಮಾನದಲ್ಲೆಲ್ಲಾ ಕರ್ತನ ಆಲಯದಲ್ಲಿ ನಮ್ಮ ಕಿನ್ನರಿ ವೀಣೆಗಳನ್ನು ನುಡಿಸುವೆವು" (ಯೆಶಾಯ 38:20). "ಕರ್ತನ ಮನೆ" ಎಂದರೆ, ದೇವರ ಆಲಯವಾಗಿರಬಹುದು ಅಥವಾ ಅದು ಪಾಲಿಸ್ತೇನ ಆಗಿರಬಹುದು.

ಇದಕ್ಕೆ ಅತಿ ವ್ಯತ್ಯಾಸವನ್ನು ತಿಳಿಸಿ, ಹಾಡಿನ ಕುರಿತು ಯೆರೆಮೀಯನು ಕೇವಲ ಮೂರು ಸಾರಿ ಮಾತ್ರ ನಮೂದಿಸಿರುವನು (ಯೆರೆಮೀಯ 31:7, 12; 51:48). "ಆಗ ಭೂಮ್ಯಾಕಾಶಗಳು ಅಲ್ಲಿನ ಸಮಸ್ತವು ಹರ್ಷ ಧ್ವನಿಗೈಯ್ಯುವವು" (ಯೆರೆಮೀಯ 51:48).

ನಾನು ನಿನ್ನ ಸಂಗೀತಗಳ ಧ್ವನಿಯನ್ನು ನಿಲ್ಲಿಸಿ ಬಿಡುವೆನು; ನಿನ್ನ ಕಿನ್ನರಿಗಳ ನುಡಿಯ ಇನ್ನು ಕೇಳಿಸದು (ಯೆಹೆಜ್ಕೇಲ 26:13). ಆಕೆಯ ಕುರಿತು ಶೋಕಗೀತೆಯನ್ನು ಎತ್ತು (ಯೆಹೆಜ್ಕೇಲನು 27:2) ಇಗೋ ನಿನ್ನ ಮಾತು ಅವರ ಎಣಿಕೆಯಲ್ಲಿ ಒಬ್ಬ ಸಂಗೀತಗಾರನು ವಾದ್ಯವನ್ನು ಜಾಣತನದಿಂದ ಬಾರಿಸಿ ಮಧುರಸ್ವರದಿಂದ ಹಾಡುವ ಪ್ರೇಮಗೀತಕ್ಕೆ ಸಮಾನವಾಗಿದೆ (ಯೆಹೆಜ್ಕೇಲನು 33:32). ಯೆಹೆಜ್ಕೇಲನ ಆಲಯದಲ್ಲಿ ಹಾಡುಗಾರರಿದ್ದರು (ಯೆಹೆಜ್ಕೇಲನು 40:44). ಆಮೋಸನು - ಇಸ್ರಾಯೇಲ್ಯರು ವೀಣೆಯ ಮೇಲೆ ಮನಸ್ಸು ಬಂದಂತೆ ಹಾಡುತ್ತಾರೆ ಎಂದು ಹೇಳಿದನು (*nebel;* ಆಮೋಸ 6:5). ಹಳೇ ಒಡಂಬಡಿಕೆಯ ವಾದ್ಯಗಳನ್ನು, ಸಂಗೀತ ವಾದ್ಯಗಳು ಎಂದು ಹೇಳುತ್ತಿದ್ದರು (*keli-shir*).

ಅವರು ಅರಣ್ಯಕ್ಕೆ ಹಿಂದಿರುಗುವಾಗ, ಹಾಡುವರು: ಎಂದು ಹೋಶೇಯನು ಒಂದು ಸಾರಿ ತಿಳಿಸಿರುವನು (RSVಯಲ್ಲಿ "ಉತ್ತರವಿದೆ") ಅವಳ ಯೌವ್ವನ ಕಾಲದಲ್ಲಿ ಇದ್ದ ಹಾಗೆ (ಹೋಶೇಯನು 2:15 [17] ). "ಚೀಯೋನಿನಲ್ಲಿ," ವೀಣೆಯಿಂದ ಹಾಡುವವರ ಗತಿಯನ್ನು ಏನು ಹೇಳಲಿ ಎಂದು ಆಮೊಸನು ಹೇಳಿದನು (ಆಮೋಸ 6:1-5). ಆ ದಿನಗಳಲ್ಲಿ ಸೌಧ (ದೇವಾಲಯಗಳ) ಕೀರ್ತನೆಯು ಕಿರಿಚಾಟವಾಗುವವು ಅಂದವು (ಆಮೋಸ 8:3). ನಿಮ್ಮ

ಉತ್ಸವಗಳನ್ನು ದುಃಖಕ್ಕೆ ಮಾರ್ಪಡಿಸುವನು (ಆಮೋಸ 8:10) ನಿಮ್ಮ ಗೀತಾ ಧ್ವನಿಯನ್ನು ನನ್ನಿಂದ ತೊಲಗಿಸಿರಿ. ನಿಮ್ಮ ವೀಣಾ ನಾದಕ್ಕೆ ಕಿವಿಗೊಡೆನು ಎಂದು ಹೇಳಿದನು (ಆಮೋಸ 5:23).

ಸಾರವು ಆರ್ಭಟಿಸಿ ಕೈಗಳನ್ನು ಮೇಲಕ್ಕೆತುತ್ತದೆ ಎಂದು ಹಬಕ್ಕೂಕನು ಹೇಳಿದನು (ಹಬಕ್ಕೂಕ 3:10). ಅದು ಕಾಡು ಪ್ರಾಣಿಗಳ (ಸ್ವರದಂತೆ ಇರುವದು; RSV) ಎಂದು ಚೆಫನ್ಯನು ವಿವರಿಸಿದ್ದಾನೆ (ಚೆಫನ್ಯ 2:14). ಅವು ನಿನೆವೆಯ ಹಾಳು ದಿಬ್ಬಗಳಲ್ಲಿರುವುದು ಚೀಯೋನ್ ನಗರಿಯೇ, ಹರ್ಷಧ್ವನಿಗೈ ಇಸ್ರಾಯೇಲ್, ಆರ್ಭಟಿಸು ಯೆರುಸಲೇಮ ಪುರಿಯೇ, ಹೃದಯ ಪೂರ್ವಕವಾಗಿ ಆನಂದಿಸು ಉಲಾಸಿಸು! (ಚೆಫನ್ಯ 3:14, 17).

## ಕೀರ್ತನೆಗಳಲ್ಲಿರುವ ಸಂಗೀತ

(ಹಳೇ ಒಡಂಬಡಿಕೆಯ ಪದ್ಯಭಾಗದಲ್ಲಿಯು ಸಹ) ಸಂಗೀತದ ಕುರಿತು ಹರಡಿ ಕೊಂಡಿರುವ ವೇದ ಭಾಗಗಳನ್ನು ಗಮನಿಸುತ್ತೇವೆ. ವಿಧವೆಯ ಹೃದಯವನ್ನು ಉತ್ಸಾಹಗೊಳಿಸುತ್ತಾನೆ ಎಂದು ಯೋಬನು ತಿಳಿಸಿರುವನು (ಯೋಬ 29:13). ಮನಗುಂದಿದವನು ಸಂಗೀತ ಹಾಡುವನು ಎಂದು ಜ್ಞಾನೋಕ್ತಿಯು ತಿಳಿಸುತ್ತದೆ (ಜ್ಞಾನೋಕ್ತಿ 25:20). ಒಳ್ಳೆಯವನು ಉಲ್ಲಾಸಗೊಂಡು ಹರ್ಷಧ್ವನಿಗೈಯುವನು (ಜ್ಞಾನೋಕ್ತಿ 29:6). ಪ್ರಸಂಗಿಯಲ್ಲಿ ಗಾಯಕ ಗಾಯಕಿಯರು ಇದ್ದರು ಎಂದು ನೋಡುತ್ತೇವೆ (ಪ್ರಸಂಗಿ 2:8).

ಕೀರ್ತನೆಗಳು ಬರಹಗಾರರ ಆಲೋಚನೆಯಲ್ಲಿಯೆಂದು, ಕೀರ್ತನೆಗಳ ತಲೆ ಬರಹಗಳು ತಿಳಿಸುತ್ತವೆ. ಇಬ್ರಿಯ, ಗ್ರೀಕ್ ಹಾಗು ಲ್ಯಾಟಿನ್ ಭಾಷೆಯ ಬೈಬಲ್‌ಗಳಲ್ಲಿ ಈ ಕುರಿತು ವ್ಯತ್ಯಾಸಗಳನ್ನು ನೋಡುತ್ತೇವೆ. ಸಂಗೀತ ಮಧ್ಯ ಭಾಗದಲ್ಲಿ ಉಪಯೋಗಿಸುವ *ಸೆಲಾ* ಎಂಬ ಪದದ ಅರ್ಥವು ಇರುವದಿಲ್ಲ.

ಸಮೂಹ ಆರಾಧನೆಯಲ್ಲಿ ಈ ಕೀರ್ತನೆಗಳನ್ನು ಉಪಯೋಗಿಸಿರುವ ಸೂಚನೆಗಳು ಇದ್ದಾಗ್ಯೂ ಅದನ್ನು ಸಮೂಹ ಆರಾಧನೆಗಾಗಲೀ ಅಥವಾ ಖಾಸಗಿಯಾದ ಆರಾಧನೆ ಗಾಗಲೀ ಉಪಯೋಗಿಸಿರುವ ಕುರುಹುಗಳಿರುವದಿಲ್ಲ. ಎರಡನೆ ವ್ಯಕ್ತಿತ್ವವಿದ್ದರು. ಅದನ್ನು ಏಕಪದದಲ್ಲಿ ಉಪಯೋಗಿಸಲಾಗಿದೆ (ಕೊಂಡಾಟ) ಅದು ಸಮೂಹದ ಆರಾಧನೆಯನ್ನು ಸೂಚಿಸುತ್ತಿರುವದಿಲ್ಲ. ಇಲ್ಲಿ ಒಬ್ಬನಿಗಿಂತಲೂ, ಅಧಿಕವಾದವರಿಗೆ ಪ್ರೋತ್ಸಾಹ ನೀಡಲಾಗಿದೆ, ಯಾಜಕರು ಮತ್ತು ಲೇವಿಯರು ಮಾತ್ರ ಹಾಡುಗಾರರು ಹಾಗು ವಾದ್ಯ ನುಡಿಸುವವರು ಆಗಿದ್ದರು. ಅಲ್ಲಿ ಕೂಡಿ ಬಂದವರು ಹಾಡುಗಾರರಾಗಿರಲಿಲ್ಲ.

150 ಕೀರ್ತನೆಗಳಲ್ಲಿ, ಒಟ್ಟು ಅರವತ್ತು - ಒಂಬತ್ತು, *ಕೀರ್ತನೆಗಳು ಉತ್ಸಾಹ ಧ್ವನಿಯಿಂದ* ಹಾಡುವಂಥವುಳಾಗಿದ್ದರೂ, ಅದರಲ್ಲಿ ವಾದ್ಯಗಳನ್ನು ಸೇರಿಸಿರುವದಿಲ್ಲ.[5]

ಒಂಬತ್ತು ಭಾಗದಲ್ಲಿ, ಬಾಯಿಗಳು ದೇವರ ಸ್ತುತಿಯನ್ನು ಹಾಡುವ ವಾದ್ಯವಾ ಗಿದೆ ಎಂದು ತಿಳಿಸಲಾಗಿದೆ.[6] ಹಾಗು ತುಟಿಗಳನ್ನು ಮತ್ತು ನಾಲಿಗೆಯನ್ನು ಎಂದು ತಿಳಿಸಲಾಗಿದೆ (ಕೀರ್ತನೆ 71:23, 24; 119:13, 171, 172). ಸಮಸ್ತ "ಜನಾಂಗಗಳು" ಹರ್ಷಿಸಿ ಆನಂದ ಘೋಷಮಾಡಲಿ ಎಂದು ತಿಳಿಸಲಾಗಿದೆ (67:4), "ಭೂರಾಜ್ಯಗಳೇ" ದೇವರಿಗೆ ಗಾಯನ ಮಾಡಿರಿ (68:32). ಸರ್ವಭೂನಿವಾಸಿಗಳು ನಿನ್ನನ್ನು ಭಜಿಸಲಿ ಎಂದು ಹೇಳಲಾಗಿದೆ (66:4).

ಹದಿನಾರು ಕೀರ್ತನೆಗಳು, ವಾದ್ಯಗಳನ್ನು ಉಪಯೋಗಿಸುವ ಕುರಿತು ನೇರವಾದ ವಿವರಣೆಯನ್ನು ನೀಡಿರುತ್ತದೆ.[7] ಲೇವಿಯರು ವಾದ್ಯಗಳೊಂದಿಗೆ ಹಾಡುವದು ಧರ್ಮಶಾಸ್ತ್ರದ ನಿಯಮವಾಗಿತ್ತು, ಅದು ಆರಾಧನೆಯ ಒಂದು ಭಾಗವೂ ಆಗಿತ್ತು, ಯೆಹೊದ್ಯರಲ್ಲಿ ವಾದ್ಯಗಳ ಮೆರವಣಿಗೆಯು ಸಹ ಇತ್ತು (68:24, 25). ಯಾಜಕರು ತುತೂರಿ ಊದುವಾಗ, ಲೇವಿ ಯರು ಹಾಡುತ್ತಿದ್ದರು (150:3). ತುತೂರಿ ತಂತಿವಾದ್ಯ (33:2), ಮತ್ತು ಕಿನ್ನರಿ (137:2;

RSV). ಕೀರ್ತನೆಗಳಲ್ಲಿ ಇವುಗಳು ಸಾಮಾನ್ಯವಾದ ವಾದ್ಯಗಳ ಪಟ್ಟಿಗಳಾಗಿವೆ.

ಕುಮ್ರಾನ್,[8] ಅಥವಾ ಇದೇ ರೀತಿಯ ಇತರೆ ಗುಂಪುಗಳು, ಕೀರ್ತನೆಗಳನ್ನು ಬರೆದು ಅದನ್ನು ಹಾಡುತ್ತಾ ಸಂರಕ್ಷಿಸಿರಬಹುದು. *ಕೃತಾಜ್ಞತಾಕೀರ್ತನೆಯು* ಕುಮ್ರಾನರು ರಚಿಸಿದ ಕೀರ್ತನೆಯಾಗಿದೆ.

*Shir* ("*ಹಾಡು*") ಎಂಬ ಪದವನ್ನು ಐವತ್ತು - ಎಂಟು ಕೀರ್ತನೆಗಳಲ್ಲಿ, ಎಪ್ಪತ್ತು ಏಳು ಸಾರಿ ತೋರ್ಪಡಿಸಲಾಗಿದೆ, ಅದರಲ್ಲಿ ವಾದ್ಯಗಳ ಕುರಿತು ಕೇವಲ ನಾಲ್ಕು ಸಾರಿ ಮಾತ್ರ ತಿಳಿಸಲಾಗಿದೆ (33:3; 71:22; 144:9; 147:7).[9] ಕ್ರಿಯಾಪದಕ್ಕೆ ಮೂರು ಅಥವಾ ನಾಲ್ಕು ಪದಗಳು ಸರಿ ಸಮಾನವಾಗಿವೆ *zamar* ("ಹಾಡು"; 27:6; 57:7; 108:1; 87:7ರಲ್ಲಿ ಸಾದ್ಯತೆಗಳಿವೆ).

ಕೆಲವು ಕೀರ್ತನೆಗಳು ವಯಕ್ತಿಕವಾದ ಹೇಳಿಕೆಗಳಾಗಿವೆ. ಕೀರ್ತನೆಗಾರನು ವಯಕ್ತಿಕವಾಗಿಯೂ, ಖಾಸಗಿಯೂಗಿಯೂ ದೇವರನ್ನು ಸ್ತುತಿಸುತ್ತಿದ್ದನು. ಕಳೆದ ನೂರುವರ್ಷಗಳಿಂದ ಇದರ ಕುರಿತಾಗಿ ವಾದವು ನಡೆದಿರುವದಿಲ್ಲ. ವಯಕ್ತಿಕವಾಗಿ ಏನಾಯಿತು ಎಂಬುದಾಗಿರದೆ, ಕರ್ತನ ಸಭೆಗಳಲ್ಲಿ ಏನಾಯಿತು ಎಂಬುದೇ ಮುಖ್ಯ ಚರ್ಚೆಯಾಗಿದೆ.

ಕೀರ್ತನೆಗಳಿಂದ ವಿಷಯಗಳನ್ನು ರುಜುವಾತು ಪಡಿಸುವವರು (ಸ್ವತಂತ್ರಕ್ಕೆ ಅಥವಾ ರುಜುವಾತುಪಡಿಸಲು) ಎರಡನೆಯ ಪ್ರಶ್ನೆಯನ್ನು ಚರ್ಚಿಸಬೇಕು. ಕೀರ್ತನೆಗಳಿಂದ ನೇಮಿಸಲ್ಪಟ್ಟಿರುವ ಎಷ್ಟು ವಿಷಯಗಳು ಕರ್ತನ ಸಭೆಯಲ್ಲಿ ನಡೆಯುವ ಆರಾಧನೆಗೆ ಸಂಬಂಧಪಟ್ಟಿರುವದಿಲ್ಲ ಎಂದು ನೋಡುತ್ತೇವೆ? ಇವುಗಳು ಸಭೆಗಳಿಗೆ ಮಾದರಿಯಾಗಿರುವದಿಲ್ಲ.

- ಕುಣಿಯುತ್ತಾ: "ಆತನ ನಾಮವನ್ನು ಕೀರ್ತಿಸಲಿ" (149:3ಎ; ನೋಡಿರಿ 30:11; 150:4).
- ದೂಪ (141:2).
- ವೈರಿಯನ್ನು ಶಪಿಸುವುದು (109:7; 137:9). ವೈರಿಗಳಿಗಾಗಿ ಪ್ರಾರ್ಥಿಸಬೇಕು ಎಂದು ಯೇಸು ಸ್ವಾಮಿಯು ತಿಳಿಸಿರುವನು.
- ಆರ್ಭಟ ಮಾಡುವುದು (47:1; 81:1).
- ಚಪ್ಪಾಳೆ ಹೊಡೆಯುವುದು (47:1).
- ಕೊಂಬನ್ನು ಊದುವುದು (81:3).
- ಮೆರವಣಿಗೆ (42:4; 68:24, 25).
- ಪ್ರಾಣಿವಧೆ (51:19).
- ಕೈಯೆತ್ತಿಕೊಂಡು ಮೊರೆಯಿಡುವದು (28:2).
- ಕೈ ತೊಳೆದು ಕೊಳ್ಳುವುದು (26:6).
- ಪರಿಶುದ್ಧ ಆಲಯದ ಕಡೆಗೆ ಅಡ್ಡಬೀಳುವುದು (5:7; RSV).

ಕೆಲವರು ಈ ಚಟುವಟಿಕೆಗಳಲ್ಲಿ ಪಾಲುಗಾರರಾದರೂ, ವಾದ್ಯ ಸಂಗೀತದವರೂ ಹಾಗು ಕಾಪೆಲ್ಲಾ ಹಾಡುಗಾರರು ಇದನ್ನು ಸಂಪ್ರದಾಯಕವಾಗಿ ಆಚರಿಸುವದಿಲ್ಲ ಏಕೆ? ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ಈ ಚಟುವಟಿಕೆಗಳ ಅನಧಿಕೃತವಾಗಿವೆ. ಕೀರ್ತನೆಗಳಲ್ಲಿ ನಾವು ಆಗಾಗ್ಗೆ ಕಾಣುವ ಇಂತಹ ಚಟುವಟಿಕೆಗಳನ್ನು ಹೊಸ ಒಡಂಬಡಿಕೆಯ ಅನಧಿಕೃತಪಡಿಸುತ್ತದೆ. ಒಂದು ವೇಳೆ ಹೊಸ ಒಡಂಬಡಿಕೆಯಲ್ಲಿ ಕೀರ್ತನೆಗಳನ್ನು ತಿಳಿಸಿದ್ದರೂ, ಮತ್ತು ಕೀರ್ತನೆಗಳನ್ನು ಉತ್ತೇಜನಕ್ಕಾಗಿ ತಿಳಿಸಿದ್ದರೂ, ಹೊಸ ಒಡಂಬಡಿಕೆಯು ಇದನ್ನು ಅಧಿಕೃತಪಡಿಸುವದಿಲ್ಲ ಕ್ರೈಸ್ತರಾದ ನಾವು ನಮಗೆ ಇಷ್ಟ

ಬಂದಂತ ವಿಷಯಗಳನ್ನು ಆಯ್ಕೆ ಮಾಡಿ ವಿಧೇಯರಾಗಲು ಮತ್ತು ಉಳಿದ ವಿಷಯಗಳನ್ನು ನಿರ್ಲಕ್ಷಿಸುವದಕ್ಕೆ ಸ್ವತಂತ್ರವನ್ನು ಪಡದಿರುವೆವೆ? ಇಲ್ಲ, ಅದು ವಿಭಜನೆಗಳನ್ನುಂಟು ಮಾಡುತ್ತದೆ.

ದೇವರ ಕುರಿತಾಗಿರುವ ಹಾಡುಗಳಿಗೆ ನೀಡಿರುವ ಆಧ್ಯತೆಗಳ ಮೂಲಕ ಭಾವನೆಗಳು ಮೂಡುತ್ತದೆ.[10] ನಿನ್ನ ಹೆಸರನ್ನು ಕೀರ್ತಿಸುವೆನು (9:2; 18:49; 61:8; 66:4; 69:30), ಯೆಹೋವನೇ ನಿತ್ಯವೂ ನಿನ್ನ ಕೃಪಾತಿಶಯವನ್ನು ಹಾಡಿ ಹರಸುವೆನು (89:1), ನಿನ್ನ ಶೂರತ್ವವನ್ನು ಕೊಂಡಾಡುವೆವು (21:13), ನಮ್ಮ ರಕ್ಷಕನಾದ ಶರಣನಿಗೆ ಜಯಘೋಶ ಮಾಡೋಣ (95:1). "ಕೀರ್ತನೆಯನ್ನು" ನಮ್ಮ ಸ್ತೋತ್ರದ ಗೀತೆ ಎಂಬುದಾಗಿ ವಿವರಿಸಲಾಗಿದೆ (40:3) ಈ ಕೀರ್ತನೆಗಳಲ್ಲಿ ಸ್ತುತಿಯ ಕುರಿತು ತಿಳಿಸಿರುವ ಹಾಗೆ ವಾದ್ಯ ಸಂಗೀತಗಳಲ್ಲಿಯೂ ಇದನ್ನು ತಿಳಿಸಲಾಗಿದೆ.[11]

ಟಿಪ್ಪಣಿಗಳು

[1]Adam Clarke, *The Holy Bible Containing the Old and New Testaments: A Commentary with Critical Notes* (Nashville: Abingdon, n.d.), 2:690. [2]M. C. Kurfees, ed., *Questions Answered by Lipscomb and Sewell* (Nashville: McQuiddy Publishing Co., 1921), 340-41; Guy N. Woods, *Questions and Answers* (Henderson, Tenn.: Freed-Hardeman College, 1976), 26-30. [3]ಯೆಶಾಯ 5:1; 16:10; 23:15, 16; 24:14; 26:19; 27:2; 30:29; 35:6, 10; 38:20; 42:10; 48:20; 51:11; 52:8; 54:1; 65:14. [4]ಯೆಶಾಯ 14:7; 35:2; 42:11; 44:23; 49:13; 52:9; 55:12. [5]ಕೀರ್ತನೆ 5:11; 7:17; 9:2, 11; 13:6; 18:49; 21:13; 27:6; 30:4; 40:3; 42:8; 47:6, 7, 59:16, 17; 61:8; 63:7; 68:4; 69:30; 75:9; 95:2; 96:1, 2; 100:1, 2; 101:1; 104:33; 105:2, 43. Statistics are from Richard E. Wolfe, *Songs, Cymbals, and Tambourines* (Nashville: 21st Century Christian, 1998), 74. [6]ಉದಾಹರಣೆ ಕೀರ್ತನೆ 40:3; 63:5; 71:8; 89:1; 109:30; 145:21. (Ibid.) [7]ವುಲ್ಫ್‌ರವರ ಉದಾಹರಣೆಯ ವಿವರಗಳು ಕೀರ್ತನೆ 33:2; 45:8; 57:7, 68; 8:25; 71:22; 81:2, 3; 92:2, 3; 98:5; 108:[2]; 144:9; 147:7; 149:3; 150:1-6. (Ibid., 75-80.) [8]ಕುಮ್ರ್ಯಾನ್ ಎಂಬುದು ಯೆಹೂದ್ಯರ ಗುಂಪು ಎಂಬುದಾಗಿ ಪಂಡಿತರು ಗುರುತಿಸಿರುತ್ತಾರೆ. ಆ ಸ್ಥಳವು 1947 ವರ್ಷದಲ್ಲಿ ಸುರುಳಿಗಳನ್ನು ಕಂಡು ಹಿಡಿದ ಮೃತ ಸಮುದ್ರದ ಬಳಿಯಿತ್ತು. [9]Wolfe, 73. [10]ಕೀರ್ತನೆ 9:11; 13:6; 27:6; 30:4; 40:3; 47:6, 7; 57:9, 16, 17; 68:4, 32; 75:9; 95:1; 96:1, 2; 100:1 ನೋಡಿರಿ.

[11]ಕೀರ್ತನೆಗಳು 33:2, 3; 47:5, 6; 57:8, 9; 71:22; 81:1-4; 87:7; 92:1-3; 98:1-5; 108:1-3; 137:2, 3; 144:9; 147:7; 149:3; 150:1-5.

## "ಹಾಡುಗಳ" ಮತ್ತು "ಹಾಡುವ" ಕುರಿತು ಕೀರ್ತನೆಗಳು

NASBಯಲ್ಲಿ ತರ್ಜುಮೆಗೊಂಡ ಕೀರ್ತನೆಗಳಲ್ಲಿ "ಹಾಡುವ" ಮತ್ತು "ಹಾಡುಗಳ" ಕುರಿತು 90ಸಾರಿ ತಿಳಿಸಿ, ಅದರ ಜೊತೆಯಲ್ಲಿ "ಹಾಡು" ಮತ್ತು "ಹಾಡುಗಳಿಗೆ" ಕುರಿತು 52ಸಾರಿ ದಾಖಲಿಸಲಾಗಿದೆ (ವಿಶೇಷ ಗ್ರಂಥಗಳಲ್ಲಿಯೂ ಸಹ) ಈ ಕೆಳಗಿನಂತೆ ಅವುಗಳನ್ನು ದಾಖಲಿಸಲಾಗಿದೆ:

- ಆನಂದ (5:11; 81:1; 84:2; 90:14; 92:4; 95:1; 98:4, 8; 100:2; 107:22; 132:9, 16; 149:5).
- ಕರ್ತನು ಹಾಗು ಆತನ ನಾಮದ ಸ್ತುತಿ (9:2, 11; 40:3; 47:6, 7; 61:8; 67:4;

68:4, 32; 69:30; 75:9; 92:1; 98:4-6; 104:33; 105:2; 108:1, 3; 135:3; 138:1; 146:2; 147:1; 149:3).

- ಕರ್ತನಿಂದ ಆಶೀರ್ವಾದ (13:6; 18:46-50; 20:4, 5; 27:5, 6; 30:11, 12; 63:7; 96:2, 3; 138:5).
- ಕರ್ತನ ಸದ್ಗುಣಗಳು (21:13; 59:16, 17; 89:1; 101:1).
- ಕೃತಜ್ಞತೆ (28:7; 30:4; 7:17; 147:7).
- ವಾದ್ಯ ಸಹಿತ ಸಂಗೀತ (33:1-3; 57:7-9; 71:22, 23; 81:2; 87:7; 92:1-3; 108:1, 2; 144:9; 147:7; 149:3).
- ಮನವಿಯ ನೆರವೇರಿಕೆ (51:14).
- ಸೃಷ್ಟಿಯ ಮೂಲಕ ಸಂತೋಷ (65:13; 96:12).
- ದೇವರ ಕ್ರಿಯೆಗಳು (66:2-4).
- ನೂತನ ಗೀತೆ (33:3; 40:3; 96:1; 98:1; 144:9; 149:1).
- ದೇವರ ವಾಕ್ಯದಿಂದ ಹಾಡುವದು (119:172).
- ಪರದೇಶದಲ್ಲಿ ಸಂಕಷ್ಟಕ್ಕೊಳಗಾಗುವಾಗ ಹಾಡುವದು (137:3, 4).

ಓವೆನ್ ಡಿ. ಓಲ್‌ಬ್ರಿಚ್

---

## ಪ್ರವಾದಿಗಳ ವಾಕ್ಯದಲ್ಲಿ ದಾಖಲಾಗಿರುವ ಸಂಗೀತ

ಪ್ರವಾದಿಗಳು ಸಹ ವಿವಿಧ ರೀತಿಯಾದ ಹಾಡುಗಳ ಹಾಗು ವಾದ್ಯ ಸಂಗೀತಗಳ ಕುರಿತು ಈ ಕೆಳಗಿನಂತೆ ತೋರಿಸಲಾಗಿದೆ:

- ಮನರಂಜನೆಗಾಗಿ ವಾದ್ಯಗಳನ್ನು ಉಪಯೋಗಿಸಲಾಗುತ್ತಿತ್ತು (ಯೆಶಾಯ 5:12; 23:16; 24:8).
- ಹಾಡಿನ ಮೂಲಕ ದೇವರಿಗೆ ಸ್ತುತಿ ಮಹಿಮೆಯನ್ನು ನೀಡುವದು (ಯೆಶಾಯ 12:2, 5; 24:16; 30:29; 42:10, 11; ಯೆರೆಮೀಯ 20:13; 31:7; ಜೆಕರ್ಯ 2:10).
- ಯೂದನು ಪುನಃ ಸ್ಥಾಪನೆಯ ಕುರಿತು ಹಾಡಿದನು (ಯೆಶಾಯ 26:1).
- ಅಸ್ಸಿರಿಯರ ಅಪಜಯಕ್ಕಾಗಿ ಇಸ್ರಾಯೇಲ್ಯರು ಸಂತೋಷದಿಂದ ಹಾಡಿದರು (ಯೆಶಾಯ 30:29-31) ಹಾಗೂ ಕರ್ತನ ಸೇವಕನ ಆಗಮನಕ್ಕಾಗಿ ನೂತನ ಕೀರ್ತನೆಯನ್ನು ಹಾಡಿದರು. ಯೆಶಾಯ 42:1-11).
- ಹೆಜ್ಕೀಯನ ದಿವಸಗಳು ವಿಸ್ತರಣೆಗೊಂಡಾಗ ತಂತಿವಾದ್ಯದಿಂದ ಸ್ತುತಿಯನ್ನು ಹಾಡಿದನು (ಯೆಶಾಯ 38:20).
- ಜನಾಂಗಗಳ ಶಿರೋಮಣಿಯ ವಿಷಯದಲ್ಲಿ ಕೆಕೇ ಹಾಕಿರಿ, ಯೆಹೋವನೇ, ಇಸ್ರಾಯೇಲಿನ ಶೇಷವಾದ ನಿನ್ನ ಜನವನ್ನು ರಕ್ಷಿಸು ಎಂದು ಘೋಷಿಸಿ ಸ್ತುತಿಸಿರಿ (ಯೆರೆಮೀಯ 31:7).
- ಯೆಹೆಜ್ಕೇಲನ ದೇವಾಲಯದ ದರ್ಶನದಲ್ಲಿ ಹಾಡುಗಾರರಿದ್ದರು (ಯೆಹೆಜ್ಕೇಲ 40:44).
- ನೆಬೂಕದ್ನೆಚ್ಚರನ ವಿಗ್ರಹಗಳ ಪೂಜೆಯಲ್ಲೂ ವಾದ್ಯಗಳನ್ನು ನುಡಿಸುತ್ತಿದ್ದರು (ದಾನಿಯೇಲ 3:5-15).
- ಇಸ್ರಾಯೇಲ್ಯರು ಅವನ ಯೌವನಕಾಲದಲ್ಲಿ ಹಾಡಿದಂತೆ ಹಾಡುವರು ಎಂದು

ಹೋಶೇಯನು ತಿಳಿಸಿರುವನು (ಹೋಶೇಯ 2:15).

- ಇಸ್ರಾಯೇಲ್ಯರು ಕೆಟ್ಟವರು ಮತ್ತು ಇತರ ಬಗ್ಗೆ ನಿರಾಸಕ್ತಿಯುಳ್ಳವರಾಗಿದ್ದರಿಂದ ದೇವರು ಅವರ ಹಾಡುಗಳನ್ನು ಕೇಳಲಿಲ್ಲ (ಆಮೋಸ 5:23; 6:5).

ಓವೆನ್ ಡಿ. ಓಲ್‌ಬ್ರಿಚ್ಟ್